ವಿಷಯ(vi): ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಸಕ್ಕರೆ ಕಾರ್ಖಾನೆಯವರು ರೈತರು ಒದಗಿಸಿದ ಕಬ್ಬಿನ ಬಾಕಿ ಹಣವನ್ನು ಪಾವತಿಸದೇ ಇರುವ ಬಗ್ಗೆ.

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ): ಮಾನ್ಯ ಅಧ್ಯಕ್ಷರೇ, ನಮ್ಮ ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಸಕ್ಕರೆ ಕಾರ್ಖಾನೆಯವರು ರೈತರು ಒದಗಿಸಿದ ಕಬ್ಬಿನ ಬಾಕಿ ಹಣವನ್ನು ಪಾವತಿ ಮಾಡುವ ವಿಚಾರದಲ್ಲಿ ನಿನ್ನೆಯ ದಿವಸ ಸಂತೇಮಾರನಹಳ್ಳಿ ಕ್ಷೇತ್ರದ ಕೇಂದ್ರ ಸ್ಥಾನದಲ್ಲಿ ಕಾರ್ಖಾನೆಯ ನೌಕರರನ್ನು ದಿಗ್ಬಂಧನ ಮಾಡಿದಂಥ ವಿಚಾರದ ಹಿನ್ನಲೆಯಲ್ಲಿ ತಮ್ಮ ಮುಖೇನ ಸರಕಾರದ ಗಮನಕ್ಕೆ ತರತಕ್ಕಂಥಾದ್ದು ಏನೆಂದರೆ, ಕಳೆದ 30-1-2001 ಮತ್ತು 2-2-2001ರ ಸಭೆಯ ವಿಫಲತೆಯ ಹಿನ್ನಲೆಯಲ್ಲಿ ರೈತರು ತಮಗೆ ಗೊತ್ತಿರುವ ಹಾಗೆ ಕಳೆದ ವಾರ ಆತ್ಮಾಹುತಿ ಮಾಡಿಕೊಳ್ಳುತ್ತೇವೆಂದು ಹೇಳಿ ವಿಧಾನಸೌಧಕ್ಕೆ ಲಗ್ಗೆ ಇಟ್ಟ ಸಂದರ್ಭದಲ್ಲಿ ಸರಕಾರದವರು ಮಧ್ಯೆ ಪ್ರವೇಶ ಮಾಡಿ ಮಾನ್ಯ ಮುಖ್ಯಮಂತ್ರಿಯವರು ಅವಕಾಶವನ್ನು ಕಲ್ಪಿಸಿಕೊಟ್ಟು ಸಕ್ಕರೆ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರೈತರ ಮತ್ತು ಕಾರ್ಖಾನೆಯ ಮಾಲೀಕರ ನಡುವೆ ಒಂದು ಕರಾರು ಪತ್ರವನ್ನು ಒಪ್ಪಂದದ ಪ್ರಕಾರ ಮಾಡಿದರು. ಅದರ ಹಿನ್ನೆಲೆಯಲ್ಲಿ ಕಾರ್ಖಾನೆಯವರು 11 ಕೋಟಿ 38 ಲಕ್ಷ ರೂಪಾಯಿಗಳ ಬಾಕಿಯನ್ನು ಕೊಡುತ್ತೇವೆಂದು ಹೇಳಿ ಮೂರು ಕಂತುಗಳಲ್ಲಿ ಕೊಡಲು ಒಪ್ಪಂದವನ್ನು ಮಾಡಿಕೊಂಡರು. ಅದರ ಪ್ರಕಾರ ಈ ತಿಂಗಳೊಳಗಾಗಿ 4 ಕೋಟಿ ರೂಪಾಯಿಗಳನ್ನು ಮೊದಲ ಕಂತಾಗಿ ಪಾವತಿ ಮಾಡುತ್ತೇವೆಂದು ಹೇಳಿ ಮತ್ತು 5 ಕೋಟಿ ರೂಪಾಯಿಗಳನ್ನು ಏಪ್ರಿಲ್ 30 ರೊಳಗಾಗಿ ಪಾವತಿ ಮಾಡುತ್ತೇವೆಂದು ಹೇಳಿ, ಉಳಿದ 2.38 ಕೋಟಿ ರೂಪಾಯಿಗಳನ್ನು ಮೇ 31 ರೊಳಗಾಗಿ ಪಾವತಿ ಮಾಡುತ್ತೇವೆಂದು ಹೇಳಿ ಯಾವ ಕರಾರು ಸಕ್ಕರೆ ಸಚಿವರ, ರೈತರ ಮತ್ತು ಸಕ್ಕರೆ ಕಾರ್ಖಾನೆ ಮಾಲೀಕರ ನಡುವೆ ಆಗಿತ್ತು ಅದನ್ನು ಕಾರ್ಖಾನೆಯವರು ಉಲ್ಲಂಘನೆ ಮಾಡಿ ಇವೊತ್ತು ಕಬ್ಬಿಗೆ ಕಟಾವಿನ ಪೇಮೆಂಟ್ ಮಾಡುತ್ತೇವೆಂದು ಹೇಳಿದ ಪ್ರಯುಕ್ತ ನಿನ್ನೆಯ ದಿವಸ ರಾತ್ರಿಯಿಡೀ ಕಾರ್ಖಾನೆಯ ನೌಕರರನ್ನು ದಿಗ್ಬಂಧನ ಮಾಡಿ ಐದು ಲೋಡ್ ಸಕ್ಕರೆ ಲಾರಿಗಳನ್ನು ಕೂಡ ರೈತರು ಸುತ್ತುವರಿದು ನಿಲ್ಲಿಸಿಕೊಂಡಿದ್ದಾರೆ. ಇದು ಬಹಳ ಗಂಭೀರವಾದ ವಿಚಾರವಾಗಿದೆ. ಈ ಕುರಿತ ಸರಕಾರದ ಮಟ್ಟದಲ್ಲಿ ಯಾವ ತೀರ್ಮಾನವಾಗಿತ್ತು ಅದನ್ನು ಆದಷ್ಟು ಬೇಗ ಬಗೆಹರಿಸತಕ್ಕಂಥಾದ್ದು ಮತ್ತು ರೈತರ ಹಣವನ್ನು ಪಾವತಿ ಮಾಡತಕ್ಕಂಥ ನಿಟ್ಟಿನಲ್ಲಿ ಸರಕಾರದವರು ಗಂಭೀರವಾಗಿ ಪರಿಗಣಿಸಿ ತೀರ್ಮಾನ ಮಾಡಿಸಿ ಬಗೆಹರಿಸಬೇಕೆಂದು ನಾನು ತಮ್ಮ ಮುಖೇನ ಸರಕಾರದವರನ್ನು ಕೇಳಬಯಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣಮೂರ್ತಿಯವರು ವಿಚಾರವನ್ನು ತಿಳಿಸಿದ್ದಾರೆ. ಆ ಶುಗರ್ ಫ್ಯಾಕ್ಟರಿಯು ಖಾಸಗಿ ಒಡೆತನದಲ್ಲಿರತಕ್ಕಂಥಾದ್ದು. ಹಿಂದೆ ಅದು ಸಹಕಾರ ಸಕ್ಕರೆ ಕಾರ್ಖಾನೆಯಾಗಿತ್ತು. ಫ್ಯಾಕ್ಟರಿಯವರು ರೈತರುಗಳಿಗೆ ಹಣವನ್ನು ಪಾವತಿ ಮಾಡಬೇಕಾಗಿದೆ. ಸರಕಾರದವರು ಇಲ್ಲಿ ಸ್ವಲ್ಪಮಟ್ಟಿಗೆ ಹತೋಟಿ ತೆಗೆದುಕೊಳ್ಳಬಹುದು. ಆದರೂ ಕೂಡ ರೈತರ ಮನವಿಯನ್ನು ತಿಳಿದು

ಸಹಕಾರಿ ಬ್ಯಾಂಕ್‌ನಿಂದ ಅಪೆಕ್ಸ್‌ಬ್ಯಾಂಕ್‌ನಿಂದ ಒಂದಷ್ಟು ಸಾಲವನ್ನು ಕೊಡಿಸಿ ರೈತರು ಹಬ್ಬ ಮಾಡಲಿ ಎನ್ನುವ ದೃಷ್ಟಿಯಿಂದ ವ್ಯವಸ್ಥೆ ಮಾಡಿದ್ದೇವೆ. ಇನ್ನೂ ಹೆಚ್ಚಿಗೆ ಹಣ ಕೊಡಿ ಎಂದು ಅವರು ಕೇಳುತ್ತಿದ್ದಾರೆ. ಸಂಸ್ಥೆಯವರು ರೈತರಿಗೆ ಹಣ ಕೊಡಬೇಕಾಗಿರುವುದು ಸತ್ಯಾಂಶ. ಆದರೆ ನಾವು ನಮ್ಮ ಬ್ಯಾಂಕ್‌ನಿಂದ ಸಾಲವನ್ನು ಕೊಡಬೇಕಾದರೆ ಅವರು ತಮ್ಮ ಆಸ್ತಿಪಾಸ್ತಿ ಮುಂತಾದ ಗ್ಯಾರಂಟಿಯನ್ನು ಕೊಡಬೇಕಾಗುತ್ತದೆ. ಆಗ ಮಾತ್ರ ನಾವು ಹಣವನ್ನು ಬಿಡುಗಡೆ ಮಾಡಬಹುದು. ಪ್ರತಿಯೊಂದು ಹಂತದಲ್ಲಿಯೂ ನಾವು ಆತ್ಮಹತ್ಯೆ ಮಾಡಿಕೊಳ್ಳುತ್ತೇವೆನ್ನುವುದು, ಲಾರಿಗಳನ್ನು ಅಡ್ಡಗಟ್ಟುವುದು ಸಕ್ಕರೆ ಹೋಗುವುದನ್ನು ನಿಲ್ಲಿಸಿದರೆ ಹೇಗೆ? ಸಕ್ಕರೆ ಹೊರಗೆ ಹೋದರೆ ತಾನೇ ನಮಗೆ ಹಣ ಬರುವುದು? ಆದ್ದರಿಂದ ತಾವುಗಳು ಆ ಭಾಗದ ಶಾಸಕರುಗಳು ರೈತರಿಗೆ ಶಾಂತರೀತಿಯಿಂದ ವರ್ತಿಸಲು ಮನವೊಲಿಸಬೇಕು. ಈ ಬಗ್ಗೆ ತಾವುಗಳು ನಮಗೆ ಸಹಕಾರ ನೀಡಿದರೆ ಆದಷ್ಟು ಬೇಗ ಸಂಸ್ಥೆಯವರು ನಮಗೆ ಒದಗಿಸಿಕೊಡಬೇಕಾದ ದಾಖಲೆಗಳನ್ನು ಒದಗಿಸಿಕೊಟ್ಟಾಗ ನಾವು ಆದಷ್ಟು ಬೇಗ ಹಣವನ್ನು ಬಿಡುಗಡೆ ಮಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರ ಸಮಕ್ಷಮದಲ್ಲಿ ನಡೆದ ಸಭೆಯಲ್ಲಿ ಮಾನ್ಯ ಸಹಕಾರ ಮಂತ್ರಿಯವರು ಹೇಳಿದ ಹಾಗೆ ಅಪೆಕ್ಸ್ ಬ್ಯಾಂಕ್ ಮುಖಾಂತರ ಎಂಡಿಸಿ ಬ್ಯಾಂಕ್‌ನವರು ಐದು ಕೋಟಿ ರೂಪಾಯಿಗಳನ್ನು ಆ ಕಾರ್ಖಾನೆಯವರಿಗೆ ಸಾಲದ ರೂಪದಲ್ಲಿ ಕೊಡತಕ್ಕಂಥಾದ್ದು ಅದರಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ರೈತರಿಗೆ ವಿತರಣೆ ಮಾಡತಕ್ಕಂಥ ಒಪ್ಪಂದದಲ್ಲಿ ಬಂತು. ಅದು ಸಕ್ಕರೆ ಮಂತ್ರಿಗಳ ಸಮಕ್ಷಮದಲ್ಲಿ ನಡೆಯಿತು. ಅದು ಮಾನ್ಯ ಮುಖ್ಯಮಂತ್ರಿಯವರ ನಿರ್ದೇಶನದ ಮೇಲೆ ನಡೆಯಿತು. ಅದರ ಆಧಾರದ ಮೇಲೆ ರೈತರುಗಳು ಈಗ ಕೇಳುತ್ತಾ ಇರುವುದು, ಮೊದಲು ನಡೆದ ಒಪ್ಪಂದವು ಲಿಖಿತ ಮೂಲಕವೇ ಇದೆ. ಕಾರ್ಖಾನೆಯ ಡೈರೆಕ್ಟರ್ ಶ್ರೀ ಶಿವರಾಮ್‌ರವರು ಒಪ್ಪಂದಕ್ಕೆ ಸಹಿ ಮಾಡಿದ್ದಾರೆ. ಒಪ್ಪಂದದ ಪ್ರಕಾರ ಸಂಸ್ಥೆಯವರು ಸಕಾಲದಲ್ಲಿ ಹಣ ಪಾವತಿ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ಮಾನ್ಯ ಅಧ್ಯಕ್ಷರು ರೈತರ ಮತ್ತು ನಮ್ಮ ರಕ್ಷಣೆಗೆ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಪರಿಸ್ಥಿತಿಯಂತೆ ನಾಳೆ ರೈತರು ಯಾವ ರೀತಿಯ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆಂದು ಹೇಳಲು ಬರುವುದಿಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು ಸಹಕಾರ ಮಂತ್ರಿಯವರು ಮತ್ತು ಸಕ್ಕರೆ ಮಂತ್ರಿಯವರು ಗಂಭೀರವಾದ ಈ ವಿಚಾರವನ್ನು ಸೂಕ್ತ ರೀತಿಯಲ್ಲಿ ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರೆ, ನಾನು ರಾಯಭಾಗ ಸಹಕಾರಿ ಸಕ್ಕರೆ ಕಾರ್ಖಾನೆಯ ವಿಚಾರವಾಗಿ ತಮಗೆ 13ನೇ ತಾರೀಖಿನಂದು ಸೂಚನೆ ಕಳುಹಿಸಿ ಪ್ರಶ್ನೆಯನ್ನು ಕೇಳಿದ್ದೇನೆ. ಆದರೆ ಇದು ತನಕವೂ ನನಗೆ ಉತ್ತರ ಬಂದಿಲ್ಲ. ಉತ್ತರ ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಕಾಲಿಂಗ್ ಅಟೆನ್‌ಶನ್ ಆಗಿರಬಹುದು, ಜೀರೋ ಅವರ್ ಆಗಿರಬಹುದು ಯಾವ ಯಾವುದಕ್ಕೆ ಉತ್ತರ ಬಂದಿಲ್ಲ ಎಂದು ತಿಳಿದುಕೊಳ್ಳಲು ನಮ್ಮ ಕಛೇರಿಗೆ ಬಂದರೆ ತಿಳಿಸುತ್ತೇವೆ. ಉತ್ತರ ಬರಲಿಲ್ಲವೆಂದರೆ ಸಂಬಂಧಪಟ್ಟವರಿಗೆ ಫೋನ್ ಮಾಡಿ ತರಿಸಿಕೊಡುತ್ತೇವೆ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರೇ, ಚಾಮರಾಜನಗರದಲ್ಲಿರುವುದು ಖಾಸಗಿ ಸಕ್ಕರೆ ಕಾರ್ಖಾನೆ. ನಮ್ಮ ಕಡೆಯಲ್ಲಿ ಇರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು ರೈತರಿಗೆ ಮೋಸ ಮಾಡುತ್ತವೆಂದು ಹೇಳಿ ನಾನು ತಮ್ಮ ಗಮನಕ್ಕೆ 13ನೇ ತಾರೀಖಿನಂದು ತಂದಿದ್ದೇನೆ. ಇದುವರೆಗೂ ಉತ್ತರವಿಲ್ಲ. ರೈತರು ಇನ್ನೂ ಕಬ್ಬು ಹೊಡೆಯುತ್ತಾ ಇದ್ದಾರೆ. ಅವರ ಬಾಕಿ ಹಣವನ್ನು ಪಾವತಿ ಮಾಡುತ್ತಾ ಇಲ್ಲ. ಹಾವೇರಿಯಲ್ಲಿನ ಶುಗರ್ ಫ್ಯಾಕ್ಟರಿಯವರಿಗೆ ಸರಕಾರದ ಗ್ಯಾರಂಟಿ ಇಲ್ಲದೆ ನಬಾರ್ಡ್‌ನವರು ನೆಗೆಟೀವ್ ನೆಟ್‌ವರ್ಕ್‌ನಲ್ಲಿರತಕ್ಕಂಥ ಶುಗರ್ ಫ್ಯಾಕ್ಟರಿಯವರಿಗೆ ಸರಕಾರ ಗ್ಯಾರಂಟಿ ಕೊಟ್ಟರೆ ಮಾತ್ರ ಸಾಲವನ್ನು ಕೊಡಬಹುದೆಂದು ಹೇಳಿದ್ದಾರೆ. ಅಲ್ಲಿ ಸರಕಾರದವರು ಗ್ಯಾರಂಟಿಯನ್ನು ಕೊಡಬೇಕಾಗಿದೆ. ರೈತರಿಗೆ ಬಾಕಿ ಕೊಡದೇ ಇದ್ದ ಕಾರಣ ವಾರಕ್ಕೊಮ್ಮೆ ಹೈವೇ ಬಂದ್ ಮಾಡುತ್ತಿದ್ದಾರೆ. ಅದರ ಬಗ್ಗೆಯೂ ಸಹಕಾರ ಸಚಿವರು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಎ.ಬಿ. ಪಾಟೀಲ್: ಮಾನ್ಯ ಅಧ್ಯಕ್ಷರೇ, ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆಗೆ ಇವೊತ್ತು ಸಹಕಾರಿ ಸಚಿವರು ಗಮನ ಕೊಡಬೇಕು. ರೈತರು ಅಲ್ಲಿ ಧರಣಿ ಕುಳಿತಿದ್ದಾರೆ. ಸರಕಾರದವರು ಗ್ಯಾರಂಟಿ ಕೊಟ್ಟರೆ ಅವರಿಗೆ ಸಾಲ ಸಿಗುತ್ತದೆ. ಅಪೆಕ್ಸ್ ಬ್ಯಾಂಕ್‌ನಿಂದ ಸಾಲವನ್ನು ಪಡೆಯುವ ಪ್ರಸ್ತಾವನೆಯು ಸರಕಾರದ ಮುಂದಿದೆ. ಈ ಬಗ್ಗೆ ಸಹಕಾರ ಸಚಿವರು ಏನಾದರೂ ಕ್ರಮ ತೆಗೆದುಕೊಳ್ಳಬೇಕಲ್ಲವೆ? ರಾಯಭಾಗ ಕಾರ್ಖಾನೆಯಲ್ಲಿ ಏನೂ ಇಲ್ಲ ಅಲ್ಲಿಗೆ ಸರಕಾರದವರು ಎರಡು ವರ್ಷದ ಗ್ಯಾರಂಟಿ ಕೊಡುತ್ತಾರೆ. ಹಾವೇರಿಯಲ್ಲಿ ಧರಣಿ ಕುಳಿತಿದ್ದರೂ, ಕಾರ್ಖಾನೆಯು ಉತ್ತಮವಾಗಿ ನಡೆಯುತ್ತಿದ್ದರೂ ಸರಕಾರದ ಗಮನ ಆ ಕಡೆಗೆ ಇಲ್ಲ. ಸಹಕಾರಿ ಸಚಿವರು ಗ್ಯಾರಂಟಿ ಕೊಡುವ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ರೈತರಿಗೆ ಅದರಿಂದ ಅನುಕೂಲವಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್: ಆ ಬಗ್ಗೆ ಮಾನ್ಯ ಸದಸ್ಯರು ನೋಟೀಸ್‌ನ್ನು ಕೊಡಲಿ.....

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಉಮೇಶ್ ಕತ್ತಿಯವರು, ಮಾನ್ಯ ಎ.ಬಿ. ಪಾಟೀಲ್‌ರವರು, ಎಸ್.ಎಸ್. ಪಾಟೀಲರು ಎಲ್ಲರೂ ಎರಡು ಮಹತ್ವದ ವಿಚಾರಗಳ ಬಗ್ಗೆ ಈ ಸದನದಲ್ಲಿ ನಾಲ್ಕು ಬಾರಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಕೃಷ್ಣಮೂರ್ತಿಯವರು, ಗುರುಪ್ರಸಾದ್‌ರವರು, ಮಹದೇವಪ್ರಸಾದ್‌ರವರು ಚಾಮರಾಜನಗರ ಸಕ್ಕರೆ ಕಾರ್ಖಾನೆಯ ವಿಚಾರವನ್ನು ಎತ್ತಿದ್ದರು. ಅದು ಖಾಸಗಿ ಕಾರ್ಖಾನೆಯಾಗಿರುವುದರಿಂದ ಅದರ ಮಾಲೀಕರನ್ನು ಮಾನ್ಯ ಸಕ್ಕರೆ ಸಚಿವರಾದ ಶ್ರೀ ಕೃಷ್ಣಪ್ಪರವರು ಅದರ ಮಾಲೀಕರನ್ನು ಕರೆಸಿ ಒಂದು ತೀರ್ಮಾನ ಮಾಡಲು ಸಾಕಷ್ಟು ಪ್ರಯತ್ನವನ್ನು ಮಾಡಿದ್ದಾರೆ. ಅದು ಮೆಚ್ಚತಕ್ಕಂಥ ವಿಚಾರ. ಅದಾದ ಮೇಲೆ ಕೆಲವು ಅಡಚಣೆಗಳು ಬಂದಿದ್ದು ಅದನ್ನು ಕೃಷ್ಣಮೂರ್ತಿಯವರು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಉಪನಾಯಕರು ಎರಡು ಪ್ರಶ್ನೆಗಳನ್ನು ಕೇಳಿದ್ದಾರೆ. ರಾಯಭಾಗ ಸಕ್ಕರೆ ಕಾರ್ಖಾನೆಯು ಸಹಕಾರಿ ಸಚಿವರ ವ್ಯಾಪ್ತಿಯಲ್ಲಿರುವ ವಿಚಾರ. ಅದೇ ರೀತಿಯಲ್ಲಿ ಹಾವೇರಿ ಸಕ್ಕರೆ ಕಾರ್ಖಾನೆಗೆ ಸಾಲ ಕೊಡದಿರುವುದರಿಂದ ರೈತರು ಬೀದಿಪಾಲಾಗುತ್ತಿದ್ದಾರೆ. ಅವರು ಕಷ್ಟದಲ್ಲಿದ್ದಾರೆ. ಸದನವು ಇನ್ನು ಎರಡು ದಿನಗಳಲ್ಲಿ ಮುಗಿಯಲಿದೆ. ಇದರ ಬಗ್ಗೆ

ನಾವು 15 ದಿನಗಳಲ್ಲಿ ಹಲವಾರು ಬಾರಿ ಒತ್ತಿ ಒತ್ತಿ ಹೇಳುತ್ತಾ ಬಂದಿದ್ದೇವೆ. ನಮಗೆ ಇಲ್ಲಿ ಉತ್ತರಕ್ಕಿಂತ ಪರಿಹಾರ ಬೇಕಾಗಿದೆ. ಆದ್ದರಿಂದ ಸಹಕಾರಿ ಸಚಿವರು ಇವತ್ತೊತ್ತು ಸಾಯಂಕಾಲವೋ, ನಾಳೆಯೋ ಇದರ ಬಗ್ಗೆ ಪರಿಹಾರ ಕೊಡುವುದರ ಬಗ್ಗೆ ಘೋಷಣೆ ಮಾಡಬೇಕೆಂದು ರೈತರ ಪರವಾಗಿ ನಾವೆಲ್ಲರೂ ಒತ್ತಾಯ ಮಾಡುತ್ತೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ: ನಾನು ಆಗಲೇ ಉಲ್ಲೇಖಿಸಿದಂತೆ ಮುಖ್ಯಮಂತ್ರಿಗಳ ನಿರ್ದೇಶನದ ಮೇಲೆ ಸಕ್ಕರೆ ಸಚಿವರು 22-3-2001 ರಂದು 3 ಗಂಟೆಗೆ ರೈತರು ಮತ್ತು ಕಾರ್ಖಾನೆ ಮಾಲೀಕರ ನಡುವೆ ನಡೆದ ಸಭೆಯ ತೀರ್ಮಾನದಂತೆ ಮಾಲೀಕರು ಮೊದಲನೇ ಕಂತಾಗಿ 4 ಕೋಟಿ ರೂಪಾಯಿಗಳನ್ನು ಈ ತಿಂಗಳೊಳಗೆ ಪಾವತಿ ಮಾಡುತ್ತೇವೆಂದು ಏನು ಹೇಳಿದ್ದರು ಅದನ್ನು ಈಡೇರಿಸುವಲ್ಲಿ ಮಾಲೀಕರು ವಿಫಲರಾಗಿದ್ದಾರೆ. ನಿನ್ನೆ ಸಕ್ಕರೆಯನ್ನು ಸಾಗಿಸುವ ಸಂದರ್ಭದಲ್ಲಿ ರೈತರು ಲಾರಿಗಳನ್ನು ಮುತ್ತಿ ದಿಗ್ಬಂಧನ ವಿಧಿಸಿ.....

ಶ್ರೀ ಎ. ಕೃಷ್ಣಪ್ಪ (ಸಕ್ಕರೆ ಸಚಿವರು): ಏಕೆ ವಿಳಂಬವಾಯಿತು ಎಂಬುದನ್ನು ಹೇಳಿ, ಸದನಕ್ಕೆ ಗೊತ್ತಾಗಲಿ. ಮಾತುಕತೆಯಲ್ಲಿ ನೀವೂ ಇದ್ದಿರಿ. ಸ್ವಾಮಿ, ಮಹಾಸ್ವಾಮಿ ಎಂದು ಹೇಳುವುದು ಬಹಳ ಸುಲಭ. What kind of efforts we did; why there is delay; is it due to technicalities, legalities and other administrative procedures which have to be met between financial institutions and that company? You please explain that.

ಶ್ರೀ ಎ.ಆರ್. ಕೃಷ್ಣಮೂರ್ತಿ: ಸಭೆ ನಡೆದು ಆಪೆಕ್ಸ್ ಬ್ಯಾಂಕ್ ಮೂಲಕ ಎಂವಿಸಿ ಬ್ಯಾಂಕ್ 5 ಕೋಟಿ ರೂಪಾಯಿ ಸಾಲವನ್ನು ಕಾರ್ಖಾನೆಗೆ ಕೊಡುವುದು ಎಂಬ ತೀರ್ಮಾನ ಈಡೇರದ ಕಾರಣ ಮತ್ತೆ ರೈತರು ಸಾಗಿಸುವ ಸಕ್ಕರೆಗೆ ಹಾಗೂ ಕಾರ್ಖಾನೆಯ ನೌಕರರಿಗೆ ದಿಗ್ಬಂಧನವನ್ನು ಮಾಡಿದ್ದಾರೆ.

ಶ್ರೀ ಎ. ಕೃಷ್ಣಪ್ಪ: ಸದಸ್ಯರೆಲ್ಲರಿಗೂ ಗೊತ್ತು, ಎಷ್ಟೊಂದು ಪ್ರಯತ್ನ ಸರ್ಕಾರ ಮಾಡಿತು, ಮೂರನೇ ಮಾಲೀಕರನ್ನು ಚೆನ್ನೈಯಿಂದ ಕರೆಸಲು ಏನೇನೆಲ್ಲ ಪ್ರಯತ್ನ ನಾವು ಮಾಡಿದೆವು ಎಂದು ಎಲ್ಲ ಗೊತ್ತಿದೆ. ಒಪ್ಪಂದ ಆಗಿದ್ದು ಸತ್ಯ, 4 ಕೋಟಿಯನ್ನು ತತ್‌ಕ್ಷಣ ರೈತರಿಗೆ ಕೊಡಬೇಕೆಂದು ಅವರಿಗೆ ತಿಳಿಸಿ ಆ ಜಿಲ್ಲೆಯ ಜಿಲ್ಲಾಧಿಕಾರಿಯನ್ನು ನಾವು ನೇಮಕ ಮಾಡಿದೆವು. ಆದರೆ ಟೆಕ್ನಿಕಲ್ ವಿಚಾರದಲ್ಲಿ ಎರಡು ಮೂರು ಎನ್‌ಒಸಿಗಳು ಬರಬೇಕು, ಮೂರು ಜನ ಡೈರೆಕ್ಟರ್‌ಗಳು ಪರ್ಸನಲ್ಲಾಗಿ ಸೆಕ್ಯುರಿಟಿ ಕೊಡಬೇಕಾದ ಕಾರಣಕ್ಕಾಗಿ ತಡವಾಗಿದೆ. ಈಗ ಕಾರ್ಮಿಕರನ್ನು ತೆಗೆದುಕೊಂಡು ಹೋಗಿ ಸೆರೆಮನೆಯಲ್ಲಿಟ್ಟಿದ್ದಾರೆ ಎಂದರೆ these are illegal activities by some people. The law of the land will take care to deal with such people who are illegally creating certain problems. ನಾವು ಏನು ಮಾಡಬೇಕೋ ಅದನ್ನು ಸಂಪೂರ್ಣವಾಗಿ ಮಾಡಿದ್ದೇವೆ. ಈಗಾಗಲೇ 28 ಲಕ್ಷ ರೂಪಾಯಿಗಳನ್ನು ರೈತರಿಗೆ ಬಟವಾಡೆ ಮಾಡಿದ್ದಾರೆ. ಉಳಿದ ದುಡ್ಡು ಕೊಡಲು ಅಪ್ರೂವಲ್ ಮಾಡಲು ಇವತ್ತು ಬ್ಯಾಂಕಿನ ಮೀಟಿಂಗ್ ನಡೆಯುತ್ತಿದೆ, ಮಂಜೂರು ಮಾಡಿದ್ದೇವೆಂದು ಸ್ಯಾಂಕ್ಷನ್

ಆರ್ಡರ್ ಕೊಟ್ಟಿದ್ದಾರೆ, ಇನ್ನೇನಿದ್ದರೂ ನೋಟುಗಳ ಕಂತೆಗಳನ್ನು ಮೂಟೆಗಳಿಗೆ ಹಾಕಿ ನಿಮ್ಮ ಕೈಗೆ ಕೊಡಬೇಕು. At this stage if somebody is trying to create law and order problem and nuisance, I think, government cannot bow to that kind of a situation. ನಾವೂ ಅನೇಕಾಗಿ ಪನೇನು ಮಾಡಬೇಕೋ ಅದು ಎಲ್ಲ ಮಾಡಿದ್ದೇವೆ. ತಾಳ್ಮೆಯಿಂದ ಇನ್ನೆರಡು ದಿವಸ ಅವರು ಕಾಯಬೇಕು. ನಾವು ಮಾಡಿಸಿರುವ ಅಗ್ರಿಮೆಂಟ್‌ಗೆ ಬದ್ಧತೆಯನ್ನು ಸರ್ಕಾರ ಇನ್ನೂ ಇಟ್ಟುಕೊಂಡಿದೆ. ಆದರೆ ಕ್ಷಣಗಳಲ್ಲೇ ಆಗಬೇಕು, ನೀವು ಹೇಳಿದ ಹಾಗೆ ಆಗಬೇಕು ಎಂದರೆ ಯಾರೂ ಜಾದು, ಮಂತ್ರ ಮಾಡಲು ಆಗುವುದಿಲ್ಲ. ನಮ್ಮ ಸಹೋದ್ಯೋಗಿಯಾಗಿ ನೀವೇನು ಸಹಕಾರ ಕೊಟ್ಟಿದ್ದೀರಿ ಅದನ್ನು ಈಗಲೂ ಕೊಡಿ. ಆ ಬಿಡಿಸಿಸಿ ಬ್ಯಾಂಕ್ 16,000 ಚೆಕ್‌ಗಳನ್ನು ಬರೆಯಬೇಕು. What is the time required? We cannot do any gimmick. ನಮ್ಮಲ್ಲಿ ನಿಮಗೆ ಅಪನಂಬಿಕೆ ಇದ್ದರೆ ಅದನ್ನು ಹೇಳಿ, ಈ ಹೌಸ್‌ನಲ್ಲಿ ನಮ್ಮ ತಪ್ಪನ್ನು ಕ್ಷಮಿಸಿ ಎಂದು ಕೇಳುತ್ತೇವೆ. ಇಷ್ಟು ಮಾಡಿದಾಗಲೂ ಇದನ್ನು ನೀವು ಮತ್ತೆ ಮತ್ತೆ ಪ್ರಸ್ತಾಪಿಸುವುದು ಸಾಧುವಲ್ಲ.

ಶ್ರೀ ಉಮೇಶ್ ವಿ. ಕತ್ತಿ (ಅಥಣಿ): ರಾಯಬಾಗ ಸಹಕಾರಿ ಸಕ್ಕರೆ ಕಾರ್ಖಾನೆ ಬಗ್ಗೆ 13ನೇ ತಾರೀಖಿನ ನೋಟೀಸ್ ಕೊಟ್ಟು ಪ್ರಸ್ತಾಪಿಸಿದ್ದೇವೆ, ಇನ್ನೂ ಉತ್ತರ ಬಂದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರಿ ಸಚಿವರು): ನನಗೆ ನೋಟೀಸ್ ಬಂದಿಲ್ಲ.

ಶ್ರೀ ಎ. ಕೃಷ್ಣಪ್ಪ: ಅಧ್ಯಕ್ಷರೇ, ಆ ಕಾರ್ಖಾನೆ ಸಮಸ್ಯೆ ಕೂಡ 14 ತಿಂಗಳಲ್ಲಿ ಉದ್ಭವವಾಗಿರುವುದಿಲ್ಲ. ನಿಮ್ಮ ಕಾಲದಲ್ಲೇ ಆಗಿದ್ದು. ಆಗಿನಿಂದ ಅದು ಪೈಲಟ್ ಆಗಿ ಈಗ ದೊಡ್ಡ ಸಮಸ್ಯೆಯಾಗಿ ಕುಳಿತಿದೆ. ಅದಕ್ಕಾಗಿ ಸರ್ಕಾರ ಕ್ಯಾಬಿನೆಟ್ ಸಬ್ ಕಮಿಟಿಯನ್ನೂ ರಚಿಸಿದೆ. ಇನ್ನೂ ಪ್ರತ್ಯೇಕವಾಗಿ ಮಾತನಾಡಲೇಬೇಕು ಎಂದರೆ ಚರ್ಚೆಗೆ ಸರ್ಕಾರ ಸಿದ್ಧವಿದೆ. ಯಾವ ರೂಪದಲ್ಲಾದರೂ ನೋಟೀಸ್ ಕಳುಹಿಸಿ ಆಗ ನಾವು ಉತ್ತರಿಸುತ್ತೇವೆ.

ಶ್ರೀ ಉಮೇಶ್ ವಿ. ಕತ್ತಿ: ರಾಯಬಾಗ ಸಕ್ಕರೆ ಕಾರ್ಖಾನೆಯ ಎಲ್ಲ ರೈತರ ಬಾಕಿಯನ್ನೂ ನಮ್ಮ ಸರ್ಕಾರ ಇದ್ದಾಗ, ನಾನು ಸಕ್ಕರೆ ಸಚಿವನಾಗಿದ್ದಾಗ ಕೊಡಿಸಿದ್ದೇವೆ. ಅದಾದಮೇಲೆ 1996ರಲ್ಲಿ ಕಾರ್ಖಾನೆ ಅಧ್ಯಕ್ಷರು ಬ್ಯಾಂಕಿನ ಅಧ್ಯಕ್ಷರಿದ್ದಾಗ ತೆಗೆದುಕೊಂಡಂತಹ ವಿಷಯ. ಆಮೇಲೆ ನಮ್ಮ ಸರ್ಕಾರದಲ್ಲಿ ಕಂತು ರೂಪದಲ್ಲಿ ಕೊಟ್ಟೆವು. ಹೀಗೆ ಎಲ್ಲ ಅನುಕೂಲ ಮಾಡಿಕೊಟ್ಟರೂ ಇನ್ನೂವರೆಗೆ ಆಗಲಿಲ್ಲ. ಆದರೆ ಇವತ್ತು ರಾಯಬಾಗ ಸಕ್ಕರೆ ಕಾರ್ಖಾನೆ ರೈತರಿಗೆ 23 ಕೋಟಿ ರೂಪಾಯಿ ಬಾಕಿ ಕೊಡಬೇಕಾಗಿದೆ. ರೈತರಿಗೆ ಮೋಸ ಮಾಡಿ ಕಬ್ಬು ತಂದು ನುರಿಸುತ್ತಿದ್ದಾರೆ. ಎರಡು ವರ್ಷದಿಂದ ರೈತರಿಗೆ ಬಾಕಿ ಕೊಟ್ಟಿಲ್ಲ. ರೈತರೇನು ಮಾಡಬೇಕು? ಇದರ ಬಗ್ಗೆ 13ನೇ ತಾರೀಖೇ ಜೀರೋ ಅವರ್‌ನಲ್ಲಿ ನೋಟೀಸ್ ಕೊಟ್ಟಿದ್ದೇವೆ. ಉತ್ತರ ಬಂದಿಲ್ಲ.

ಅಧ್ಯಕ್ಷರು: ಆಯಿತು, ಇನ್ನೊಂದು ದಿವಸ ತೆಗೆದುಕೊಳ್ಳೋಣ ಬಿಡಿ. ಹೊಸದಾಗಿ ನೀವು ನೋಟೀಸ್ ಕೊಡಿ.